**ದಿನಾಂಕಃ 05/12/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ಆರೋಪಿತರ ಪರ ಶ್ರೀ ಎ.ಪಿ ವಕೀಲರಿಂದಃ**

4. 4 ಎಕರೆ ಜಮೀನು ನನ್ನ ತಾಯಿಯ ಹೆಸರಿನಲ್ಲಿದೆ. 2017-18 ರಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಒಟ್ಟು 8 ಎಕರೆ ಜಮೀನು ಇತ್ತು. ಸದರಿ ಸ್ವತ್ತು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿ. ನನ್ನ ತಂದೆಗೆ ಇಬ್ಬರು ಸಹೋದರರು. ನನ್ನ ಚಿಕ್ಕಪ್ಪನಿಗೆ ಒಬ್ಬಳೇ ಮಗಳು. ಸದರಿ ಆಸ್ತಿಯನ್ನು ನಾವು ವಿಭಾಗ ಮಾಡಿಕೊಂಡಿಲ್ಲ. ಅವರೂ ಸಹ ಸದರಿ 8 ಎಕರೆ ಜಮೀನಿನಲ್ಲಿ ಸ್ವಾಧೀನ ಇದ್ದಾರೆ. ನಾವು ಮತ್ತು ಅವರು ಒಟ್ಟಿಗೆ ಜೀವನ ಮಾಡುತ್ತಿದ್ದೇವೆ. ನನ್ನ ಚಿಕ್ಕಪ್ಪನ ಮಗಳ ಹೆಸರು ಗಿರಿಜಾ. ಸರ್ವೆ ನಂ.38 ರಲ್ಲಿ ಗಿರಿಜಾ ರವರು ಸ್ವಾಧೀನಹೊಂದಿದ್ದಾರೆ ಎಂದರೆ ಸರಿಯಲ್ಲ. ನಿಪಿ.1 ಸಿಟಿಎಸ್ ಚೆಕ್ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ.1 ಚೆಕ್ 2010 ರಲ್ಲೇ ಬ್ಯಾನ್ ಆಗಿದೆ ಎಂದರೆ ಸರಿಯಲ್ಲ. ಆರ್.ಬಿ.ಐ ಬ್ಯಾಂಕ್ ನ ವರು 2010 ರಲ್ಲಿ ಸಿಟಿಎಸ್ ಚೆಕ್ ಅಲ್ಲದ ಚೆಕ್ಕುಗಳನ್ನು ಸ್ವೀಕರಿಸಬೇಡಿ ಎಂದು ಆದೇಶ ಹೊರಡಿಸಿತ್ತು ಎಂದರೆ ನನಗೆ ಗೊತ್ತಿಲ್ಲ. ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ 2017-18 ರಲ್ಲಿ ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಬ್ಯಾಂಕ್ ಅಧಿಕಾರಿಗಳನ್ನು ಶಾಮೀಲು ಮಾಡಿಕೊಂಡು 'ಸಾಕಷ್ಟು ಹಣವಿಲ್ಲ' ಎಂದು ಹಿಂಬರಹ ಪಡೆದಿದ್ದೇನೆ ಎಂದರೆ ಸರಿಯಲ್ಲ. ಹಿಂಬರಹವನ್ನು ಮಾಕೋಡು ಶಾಖೆಯ ಕಾವೇರಿ ಕಲ್ಪತರು ಬ್ಯಾಂಕ್ ನವರು ನೀಡಿದ್ದಾರೆ. ನನ್ನ ಬ್ಯಾಂಕಿನವರು ಪಿರಿಯಾಪಟ್ಟಣ ವಿಜಯಾ ಬ್ಯಾಂಕ್‌ಗೆ ಚೆಕ್ಕನ್ನು ಕಳುಹಿಸಿದ್ದರು.

5. ಬ್ಯಾಂಕ್ ನವರನ್ನು ಸಾಕ್ಷಿದಾರರನ್ನಾಗಿ ಮಾಡುವುದಿಲ್ಲ. ನಾನೇ ಸಾಲಗಾರನಾಗಿದ್ದರಿಂದ ಆರೋಪಿತನಿಗೆ ಸಾಲಕೊಡುವ ಪ್ರಮೇಯ ನನಗೆ ಇಲ್ಲ ಹಾಗೂ ಸಾಲ ಪಡೆಯದೇ ಇರುವುದರಿಂದ ಆರೋಪಿತ ಚೆಕ್ ನೀಡುವ ಪ್ರಮೇಯವೇ ಇಲ್ಲ ಎಂದರೆ ಸರಿಯಲ್ಲ. ದಿಃ20/12/2017 ರಂದು ಆರೋಪಿತ ನನಗೆ ಚೆಕ್ ನೀಡಿರಲಿಲ್ಲ ಎಂದರೆ ಸರಿಯಲ್ಲ. ದಿಃ02/01/2018 ರಂದು ಚೆಕ್ ಅಮಾನ್ಯಗೊಂಡಿಲ್ಲ, ಹಿಂಬರಹ ನೀಡಿಲ್ಲ ಎಂದರೆ ಸರಿಯಲ್ಲ. ದಿಃ 06/02/2018 ರಂದು ಆರೋಪಿತ ನಾನು ನೀಡಿದ

ನೋಟೀಸನ್ನು ಸ್ವೀಕರಿಸಿದ್ದರು. ನೋಟೀಸನ್ನು ಸ್ವೀಕರಿಸಿದ ಬಗ್ಗೆ ಸ್ವೀಕೃತಿಯನ್ನು ನೋಡಿದ್ದೇನೆ. ನಾನು ಆರೋಪಿತನಿಗೆ 500 ಮುಖಬೆಲೆಯ 400 ನೋಟುಗಳನ್ನು ನೀಡಿದ್ದೆ. ನಾನು ಯಾವುದೇ ಹಣವನ್ನು ಸಾಲವನ್ನು ನೀಡದಿದ್ದರೂ ಸಹ ಅನ್ಯತಾ ಪಾಯಿದೆ ಹೊಂದಲು ಆರೋಪಿತನ ವಿರುದ್ಧ ಸುಳ್ಳು ಪಿರ್ಯಾದು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ತಿಳುವಳಿಕೆ ಪತ್ರ ಆರೋಪಿತನಿಗೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**